ಒಲಿಸಿಕೊಳ್ಳುವಲ್ಲಿ ಸೋಲುತ್ತಿದ್ದನು. ಉಳಿದ ರಾಣಿಯರು ಚಿನ್ನದ ಹಾರಗಳು, ವಜ್ರದುಂಗುರಗಳು ಉಡುಗೊರೆಯಾಗಿ ಸಿಕ್ಕಾಗ ರಾಜನನ್ನು ಆಕಾಶಕ್ಕೇರಿಸಿ ಹೊಗಳುತ್ತಿದ್ದರು. ಆದರೆ ಕಿರಿಯ ರಾಣಿಗೆ ಮಾತ್ರ ಅದೇಕೋ ಈ ಅಲಂಕಾರ, ಆಭರಣಗಳೆಂದರೆ ಅಷ್ಟಕ್ಕಷ್ಟೆ. ಮಹಾರಾಜನೆದುರು ಹುಸಿ ಆನಂದವನ್ನು ತೋರಿಸುವುದು ಅವಳಿಗೆ ಇನ್ನಷ್ಟು ಹಿಂಸೆಯಾಗುತ್ತಿತ್ತು. ಹೀಗಾಗಿ ಅಂಥ ಸಮಯದಲ್ಲಿ ಮೌನಕ್ಕೆ ಜಾರಿ ಬಿಡುತ್ತಿದ್ದಳು. ಮಹಾರಾಜನಿಗೆ ಇವಳ ಮನಸನ್ನು ತನಗೆ ಗೆಲ್ಲಲಾಗುತ್ತಿಲ್ಲವಲ್ಲ ಎನ್ನುವ ಕೊರಗು ಸುಡುತ್ತಿತ್ತು. ಹೀಗಿರಲು ಒಮ್ಮೆ ವನವಿಹಾರಗೈಯ್ಯುವಾಗ ಮ್ಲಾನವದನನಾದ ದೊರೆಯನ್ನು ಕಂಡು ಮಹಾಮಂತ್ರಿಯು ಚಿಂತೆಯನ್ನು ಮನಸಿನಿಂದ ಹೊರಗೆಡಹಲು ಭಿನ್ನವಿಸಿಕೊಂಡನು. ಮಹಾರಾಜನು ಸೂಕ್ಷ್ಮವಾಗಿ ಕೆಲವೇ ನುಡಿಗಳನ್ನು ಆಡಿದರೂ ಮಹಾರಾಜನ ಅಂತರಂಗವನ್ನು ಅರಿಯುವ ಪ್ರಯತ್ನದಲ್ಲಿ ಮಂತ್ರಿಯು ಸಫಲನಾದನು. ಸರಿ, ಅದಕ್ಕೆ ಪರಿಹಾರವನ್ನೂ ಮನಗಂಡು ದೊರೆಗಳ ಮುಂದೆ ಅದನ್ನು ಮಂಡಿಸಿದನು. ಅತೃಪ್ತ ಮನಸುಗಳ ಅರಳಿಸುವ ಉಪಾಯವನ್ನು ಮಹಾರಾಜನಿಗೆ ಅರುಹಿದನು. ನೂರಾರು ರಾಜ್ಯಗಳನ್ನು ಗೆದ್ದ ಮಹಾರಾಜ ಒಂದು ಹೆಣ್ಣಿನ ಮನಸನ್ನ ಗೆಲ್ಲದಿದ್ದರೆ ಇತಿಹಾಸ ತನ್ನ ಬಗ್ಗೆ ಆಡಿಕೊಂಡೀತು ಎಂದು ಮಹಾಮಂತ್ರಿಯ ಯೋಜನೆಗೆ ಒಪ್ಪಿದನು.

ಆ ಪ್ರಕಾರ ಸ್ವತಃ ಮಹಾಮಂತ್ರಿಯು ವೇಷ ಮರೆಸಿಕೊಂಡು ಕುದುರೆಯೇರಿ ಹಲವು ಯೋಜನಗಳನ್ನು ದಾಟಿ ಮಗಧಕ್ಕೆ ಬಂದು ಮಧುರಮತಿ ಎಂಬ ಕವಿಯನ್ನು ಭೇಟಿ ಮಾಡಿದನು. ಒಂದು ಕಾಲದಲ್ಲಿ ಮಧುರಮತಿಯ ಕಾವ್ಯವೆಂದರೆ ಸಾಕ್ಷಾತ್ ಸರಸ್ವತಿ ದೇವಿ ವೀಣೆ ನುಡಿಸಿದಂತೆ ಎಂದು ಅಲ್ಲಿಯ ಜನರು ಆಡಿಕೊಳ್ಳುತ್ತಿದ್ದರು. ಮಗಧ ರಾಜನ ಆಸ್ಥಾನ ಕವಿಯಾಗಿದ್ದ ಮಧುರಮತಿಯು ಆ ರಾಜ್ಯವು ಪತನವಾದ ನಂತರ ರಾಜಾಶ್ರಯವಿಲ್ಲದೇ ದಿಕ್ಕೆಟ್ಟಿದ್ದನು. ಸಾಮಾನ್ಯರ ಸುಖ ದುಃಖಗಳನ್ನು ಹಾಡಿಕೊಳ್ಳುತ್ತಾ ಕಷ್ಟದ ಜೀವನ ನಡೆಸುತ್ತಿದ್ದನು. ಮಹಾಮಂತ್ರಿಯ ಪ್ರಸ್ತಾಪಕ್ಕೆ ಸಮ್ಮತಿಸಿ ಮಡದಿಯೊಡನೆ ಉಜ್ಜಯನಿಗೆ ಬಂದು ಕುಂಬಾರನ ವೇಷದಲ್ಲಿ ಅನಾಮಿಕನಾಗಿ ನೆಲೆಯೂರಿದನು. ತನ್ನ ಕಾವ್ಯ ಶಕ್ತಿಯನ್ನು ಆಹ್ವಾನಿಸಿಕೊಂಡು ಸುಂದರ ಸಾಲುಗಳನ್ನು ರಚಿಸಿ ಗುಪ್ತವಾಗಿ ಅದನ್ನು ವಿಜಯಶೇಖರ ಮಹಾರಾಜನಿಗಾಗಿ ತಲುಪಿಸಲು ಪ್ರಾರಂಭಿಸಿದನು. ಆ ಕಾವ್ಯಸಾಲುಗಳಿಗೆ ಮಹಾರಾಜನು ತನ್ನ ಅಂಕಿತವನ್ನಿಟ್ಟು ಕಿರಿಯ ರಾಣಿಗೆ ಕಳುಹಿಸಿ ಕೊಡುವನು. ರಾಣಿಯ ಸಾನಿಧ್ಯದಲ್ಲಿರುವಾಗ ಕಾವ್ಯವಾಚನಗೈದು ಅವಳನ್ನು ಮೆಚ್ಚಿಸುವಲ್ಲಿ ಯಶಸ್ವಿಯೂ ಆದನು. ಒಡ್ಡೋಲಗದಲ್ಲಿ, ಮಂತ್ರಿಮಹೋದಯರ ಜೊತೆಗಿನ ಸಭೆಗಳಲ್ಲಿ, ಆಪ್ತರೊಂದಿಗಿನ ಗುಪ್ತ ಸಮಾಲೋಚನೆಯ ಹೊತ್ತಲ್ಲಿ, ಅಷ್ಟೇಕೆ ಇತರ ರಾಣಿಯರ ಜೊತೆಗಿನ ವಿಹಾರದಲ್ಲೂ ಮಹಾರಾಜನು ಮಧುರಮತಿ ರಚಿತ ಕಾವ್ಯಸಂದೇಶಗಳನ್ನು ಹಿಡಿದು ಉರುಹೊಡೆಯುವಂತಾಯಿತು.

ಮಧುರಮತಿಯು ಮುಂಜಾವು, ಮುಸ್ಸಂಜೆ, ಮೋಡ, ಮಳೆ, ಹೂವು, ಹಸಿರು, ನದಿ, ಸಾಗರ, ಭೂಮಿ, ಆಕಾಶ ಎಲ್ಲ ಸೌಂದರ್ಯವನ್ನೂ ಶಬ್ದ ಸಾಲುಗಳಲ್ಲಿ ಮರುಸೃಷ್ಟಿಸುವನು. ಅವನ ಕಾವ್ಯ ಸಂದೇಶಗಳಲ್ಲಿ ಸುರಿಯುವ ಮಳೆ, ಅರಳುವ ಹೂವು, ಬಿರಿಯುವ ಗಂಧ, ಹರಿಯುವ ಗಂಗೆ, ಸುಳಿಯುವ ಗಾಳಿ, ನಲಿಯುವ ನದಿ ಎಲ್ಲವೂ ಇನ್ನಷ್ಟು ಅದ್ಭುತವಾಗಿ ಕಾಣುತ್ತಿದ್ದವು. ಒಲವು ನಲಿವು ಪ್ರೀತಿ ಪ್ರೇಮ ಕಾಮವನ್ನು ಶಬ್ದಗಳಲ್ಲಿ ಮೂರ್ತರೂಪಕ್ಕಿಳಿಸಿ ಮೈಮನಸುಗಳು ಮುದಗೊಳ್ಳುವಂತೆ ಮಾಡುವನು. ಅವ್ಯಕ್ತ ಭಾವನೆಗಳಿಗೂ ಎದೆಗೂಡಲ್ಲಿ